■ ಹನಿ

## ವಿರಾಟ್ ಸಾಧನೆ!

**ಹೆ**ಸರೇ ವಿರಾಟ್ ಎಂದಿರುವುದರಿಂದ ಈತ ಕೈಹಚ್ಚಿದಲ್ಲೆಲ್ಲ ವಿರಾಟ್ ಸಾಧನೆಯೇ. ಭಾರತದ ಹೆಮ್ಮೆಯ ಕ್ರಿಕೆಟಿಗ, ಬೆಂಗಳೂರಿನ ಆರ್‌ಸಿಬಿ ತಂಡದ ನಾಯಕ ವಿರಾಟ್ ಕೊಹ್ಲಿ ಕಿರೀಟಕ್ಕೆ ಇನ್ನೊಂದು ಗರಿ ಮೂಡಿದೆ. ವಿಶ್ವದಲ್ಲಿ ಮುಂದಿನ ಮೂರು ವರ್ಷಗಳಲ್ಲಿ ಅತ್ಯಂತ ಹೆಚ್ಚು ಮಾರ್ಕೆಟಿಂಗ್ ಮಾಡಬಹುದಾದ 50 ಕ್ರೀಡಾಳುಗಳ ಪೈಕಿ ಕೊಹ್ಲಿ ಎರಡನೇ ಸ್ಥಾನ ಗಳಿಸಿದ್ದಾರೆ. ಬ್ರಿಟನ್ನಿನ ಫಾರ್ಮುಲಾ ಒನ್ ಚಾಂಪಿಯನ್ ರೇಸರ್ ಲೂಯಿಸ್ ಹ್ಯಾಮಿಲ್ಟನ್ ಬಳಿಕ ಕೊಹ್ಲಿಯೇ ನಂಬರ್ ಒನ್!

ವಿಶ್ವದ ಅತ್ಯಂತ ಜನಪ್ರಿಯ ಕ್ರೀಡಾಳುಗಳಾದ ರೊನಾಲ್ಡೊ, ಹುಸೇನ್ ಬೋಲ್ಟ್, ಮೆಸ್ಸಿ, ಜೊಕೊವಿಕ್ ಮುಂತಾದವರನ್ನೆಲ್ಲ ಹಿಂದಿಕ್ಕಿ ಕೊಹ್ಲಿ ಈ ಸ್ಥಾನ ಗಳಿಸಿರುವುದು ಹೆಮ್ಮೆಯ ವಿಷಯ. ಅದರಲ್ಲೂ ಈ 50ರ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಇನ್ನೊಬ್ಬ ಕ್ರಿಕೆಟಿಗ ಎಂದರೆ, ಕೆವಿನ್ ಪೀಟರ್‌ಸನ್ ಮಾತ್ರ. ಅದೂ 25ನೇ ಸ್ಥಾನ. ಕ್ರೀಡಾಂಗಣದಲ್ಲಿ ಸದಾ ಮಿಂಚುವ ಕೊಹ್ಲಿ, ಜಾಹೀರಾತು ಕಂಪೆನಿಗಳ ಅಚ್ಚುಮೆಚ್ಚಿನ ತಾರೆಯೂ ಹೌದು. ಚಾಕೊಲೇಟ್‌ನಿಂದ ಹಿಡಿದು ರಿಯಲ್ ಎಸ್ಟೇಟ್ ಕಂಪೆನಿಗಳವರೆಗೆ ಎಲ್ಲರಿಗೂ ಕೊಹ್ಲಿಯೇ ಬೇಕು. ಪೆಪ್ಸಿ, ಅಡಿಡಾಸ್, ಟಿವಿಎಸ್ ಮೋಟರ್ಸ್, ಫಾಸ್ಟ್ರ್ಯಾಕ್, ರಾಯಲ್ ಚಾಲೆಂಜ್, ಫೇರ್ ಅಂಡ್ ಲವ್ಲೀ, ಹರ್ಬಲೈಫ್, ಬೂಸ್ಟ್, ಮಂಚ್, ಸೆಲ್ಕಾನ್ ಮೊಬೈಲ್ಸ್ ಮುಂತಾಗಿ 30ಕ್ಕೂ ಹೆಚ್ಚು ಕಂಪೆನಿಗಳ ಕೊಹ್ಲಿಯೇ ಜಾಹೀರಾತು ರಾಯಭಾರಿ! ಇತ್ತೀಚೆಗೆ ಬಾಲಿವುಡ್ ನಟಿ ಅನುಷ್ಕಾ ಶರ್ಮಾ ಜತೆಗಿನ ಒಡನಾಟದ ಬಳಿಕ ಕೊಹ್ಲಿ ಅತ್ಯಂತ ಹೆಚ್ಚು ಬೇಡಿಕೆಯ ಬ್ಯಾಚುಲರ್ ಕೂಡಾ ಆಗಿದ್ದಾನೆ. ವಿರಾಟ್ ಸಾಧನೆ ಅಲ್ಲವೆಂದವರು ಯಾರು?





## ಮರಳಿ ಬಂದ ಮಂಜು!

**ಈ**ಕೆ ಮಂಜು ವಾರಿಯರ್. ಮಲಯಾಳಂ ಸಿನಿಮಾಪ್ರಿಯರ ಅಚ್ಚುಮೆಚ್ಚಿನ ನಟಿ. 90ರ ದಶಕದ ಉತ್ತರಾರ್ಧದಲ್ಲಿ ಮಂಜು ವಾರಿಯರ್ ಮಲಯಾಳಂನ 'ನಂಬರ್ ಒನ್' ನಟಿ. ಈಕೆಯ ಖ್ಯಾತಿ ಎಷ್ಟಿತ್ತೆಂದರೆ, ಮಲಯಾಳಿಗಳು ಈಕೆಯನ್ನು 'ಲೇಡಿ ಮೋಹನ್‌ಲಾಲ್' ಎಂದೇ ಕರೆಯುತ್ತಿದ್ದರು! ಈಕೆ ನಟಿಸಿದರೆ ಸಾಕು, ಆ ಚಿತ್ರ ಬಾಕ್ಸಾಫೀಸ್‌ನಲ್ಲಿ ಹಿಟ್ ಆಗುವುದು ಖಚಿತ! 1996ರಲ್ಲಿ ರಾಜ್ಯಪ್ರಶಸ್ತಿ, 96ರಿಂದ 99ರವರೆಗೆ ಸತತ ನಾಲ್ಕು ವರ್ಷ ಅತ್ಯುತ್ತಮ ನಟಿಯಾಗಿ ಫಿಲಂಫೇರ್ ಪ್ರಶಸ್ತಿ, 99ರಲ್ಲಿ 'ಕಣ್ಣೆಳುತ್ತಿ ಪೊಟ್ಟುಂ ತೊಟ್ಟು' ಚಿತ್ರದ ನಟನೆಗಾಗಿ ರಾಷ್ಟ್ರೀಯ ಜ್ಯೂರಿ ಪ್ರಶಸ್ತಿ– ಹೀಗೆ ಮಂಜು ಅಡಿ ಇಟ್ಟಲ್ಲೆಲ್ಲ ಹರ್ಷೋದ್ಗಾರ. ಖ್ಯಾತಿಯ ಉತ್ತುಂಗದಲ್ಲಿ ಇದ್ದಾಗಲೇ ಹೀರೊ ದಿಲೀಪ್‌ರನ್ನು ಮದುವೆಯಾಗಿ ನಟನೆಗೆ ಟಾಟಾ ಎಂದದ್ದು ವಿಶೇಷ.

ದಿಲೀಪ್ ಮತ್ತು ಮಂಜು ಜೋಡಿಯ 14 ವರ್ಷಗಳ ದಾಂಪತ್ಯಗೀತೆ ಮಧುರವಾಗಿಯೇ ಇತ್ತು. ಒಬ್ಬ ಮಗಳೂ ಹುಟ್ಟಿದಳು. ಆದರೆ ಈಗ ಇದ್ದಕ್ಕಿದ್ದಂತೆಯೇ ಇಬ್ಬರ ನಡುವಣ ವೈಮನಸ್ಯ ಬಯಲಾಗಿದೆ. ಫ್ಯಾಮಿಲಿ ಕೋರ್ಟ್‌ನಲ್ಲಿ ವಿಚ್ಛೇದನದ ಅರ್ಜಿಯ ವಿಚಾರಣೆ ನಡೆದಿದೆ. ಮಗಳು ಅಪ್ಪನ ಜತೆಗೆ ವಾಸಿಸುವುದಾಗಿ ಹೇಳಿದ್ದಾಳೆ. 'ಮದುವೆಯಾದ ಬಳಿಕ ಸಿನಿಮಾದಲ್ಲಿ ನಟಿಸಬಾರದು ಎಂದು ಹೇಳಿದ್ದೆ. ಅವಳೂ ಒಪ್ಪಿದ್ದಳು. ಆದರೆ ಕಳೆದ ವರ್ಷದಿಂದ ಮತ್ತೆ ನಟಿಸುವುದಾಗಿ ಹಠ ಹಿಡಿದಳು. ಅದೇ ವಿಚ್ಛೇದನಕ್ಕೆ ಮೂಲ' ಎಂದಿದ್ದಾರೆ ದಿಲೀಪ್.

ಕಳೆದ ವಾರ ಮಂಜು ವಾರಿಯರ್ ನಟಿಸಿರುವ ಹೊಸ ಮಲಯಾಳಂ ಚಿತ್ರ 'ಹೌ ಓಲ್ಡ್ ಆರ್ ಯೂ' ಬಿಡುಗಡೆಯಾಗಿ 'ಸೂಪರ್‌ಹಿಟ್' ಎನ್ನಿಸಿಕೊಂಡಿದೆ. 34ರ ಹರೆಯದ ಮಹಿಳೆಯೊಬ್ಬಳು ತನ್ನ ಜೀವನದ ದುರಂತಗಳನ್ನು ಮೆಟ್ಟಿ ನಿಂತು ಗೆಲ್ಲುವ ಪಾತ್ರವದು. 'ಈ ಚಿತ್ರದ ಕಥೆ ಮಂಜುವಿನದ್ದೇ' ಎನ್ನುವುದು ಎಲ್ಲರ ಅನಿಸಿಕೆ.

ಅದೇನೇ ಇದ್ದರೂ, ಮದುವೆಯಾಗಿ, ನಿವೃತ್ತಿ ಹೊಂದಿ 14 ವರ್ಷಗಳ ಬಳಿಕ ಚಿತ್ರರಂಗಕ್ಕೆ ಮರಳಿದ ಮಂಜುವಿನ ಆಕರ್ಷಣೆ ಕಡಿಮೆಯಾಗಿಲ್ಲ! ಈ ಚಿತ್ರದ ನಿರ್ದೇಶಕ ರೋಶನ್ ಆ್ಯಂಡ್ರೂ ಅವರ ಇನ್ನೊಂದು ಹೊಸ ಚಿತ್ರಕ್ಕೆ ಮಂಜು ಸಹಿ ಹಾಕಿದ್ದಾರೆ. ಜತೆಗೆ ಮೋಹನಲಾಲ್ ನಟನೆಯ ಹೊಸ ಚಿತ್ರದಲ್ಲೂ ಮಂಜು ನಟಿಸುವುದು ಖಾತ್ರಿಯಾಗಿದೆ. ಇಷ್ಟೆಲ್ಲ ಆಗಿದ್ದರೂ ತಮ್ಮ ಡೈವೋರ್ಸ್‌ನ ಕಾರಣದ ಬಗ್ಗೆ ಮಂಜು ತುಟಿಪಿಟಿಕ್ ಎಂದಿಲ್ಲ. '14 ವರ್ಷ ವನವಾಸದಿಂದ ಮರಳಿ ಬಂದಳು ಮಂಜು..' ಎಂದು ಹಾಡಲಡ್ಡಿಯಿಲ್ಲ!

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65